ವಿಷಯ : ಕನ್ನಡ ಚಲನ ಚಿತ್ರಗಳಿಗೆ ಸಹಾಯ ಧನ.

ಪ್ರಶ್ನೆ : 204 (598) ಶ್ರೀ **ಜ್ಞಾನದೇವ ದೊಡ್ಡಮೇಟಿ** (ರೋಣ್).— ಮಾನ್ಯ ವಾರ್ತಾ ಪ್ರಚಾರ ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) 1983-84ನೇ ಸಾಲಿನವರೆಗೆ ಕನ್ನಡ ಚಲನ ಚಿತ್ರಗಳಿಗೆ ಸಹಾಯ ಧನವಾಗಿ ಬಿಡುಗಡೆ ಮಾಡಬೇಕಾದ ಹಣವೆಷ್ಟು ;

ಆ) ಈಗ ಸದ್ಯದಲ್ಲಿ ಬಿಡುಗಡೆ ಮಾಡಲಾದ ಹಣವೆಷ್ಟು? ಹಾಗೂ ಉಳಿಕೆಯ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ;

ಇ) ರೂಪಕ ಚಲನಚಿತ್ರಗಳಿಗೆ ಪೂರ್ಣ ತೆರಿಗೆ ವಿನಾಯಿತಿಯನ್ನು ನೀಡುವ ಬಗ್ಗೆ ಅನುಸರಿಸುವ ವಿಧಾನಗಳೇನು ;

ಈ) ಎಲ್ಲಾ ಕನ್ನಡ ಚಲನ ಚಿತ್ರಗಳಿಗೂ ತೆರಿಗೆ ವಿನಾಯಿತಿ ನೀಡುವ ಪ್ರಶ್ನೆ ಸರ್ಕಾರದ ಮುಂದಿದೆಯೇ ?

ಉತ್ತರ : ಶ್ರೀ ಎಂ. ರಘುಪತಿ(ವಾರ್ತಾ, ಪ್ರವಾಸೋದ್ಯಮ ಸಚಿವರು).—ಅ) 40,00,000-00 (ರೂ. ನಲವತ್ತು ಲಕ್ಷ)

ಆ) ಸಂಪೂರ್ಣ ಹಣ ಬಿಡುಗಡೆಯಾಗಿದೆ. ಆದುದರಿಂದ ಬಾಕಿ ಮೊಬಲಗು ಏನೂ ಇಲ್ಲ.

ಇ) ಕರ್ನಾಟಕ ಮನರಂಜನಾ ಕಾಯ್ದೆ 1958ರ ಅನುಗುಣವಾಗಿ, 4-4-81ರಿಂದ ಶೇಕಡಾ 100ರಷ್ಟು ತೆರಿಗೆ ವಿನಾಯಿತಿಯನ್ನು ರಾಜ್ಯ ಅಥವಾ ಕೇಂದ್ರ ಸರ್ಕಾರದಿಂದ ಪ್ರಶಸ್ತಿ ಪಡೆದ ಪ್ರಾಂತೀಯ ಭಾಷೆಗಳ ಚಿತ್ರಗಳಿಗೆ ಒಂದು ವರ್ಷಗಳ ಕಾಲ ನೀಡಲಾಗುವುದು. ಆದರಂತೆ ಉಳಿದ ಭಾಷಾ ಚಿತ್ರಗಳಿಗೆ ಮೂರು ವಾರಗಳ ಕಾಲ ಶೇಕಡ 100 ತೆರಿಗೆ ವಿನಾಯಿತಿ ನೀಡಲಾಗುವುದು.

ಇ) ಈ ಕೆಳಕಂಡ ಗುಂಪಿನ ಚಿತ್ರಗಳಿಗೂ ಶೇಕಡ 100 ತೆರಿಗೆ ವಿನಾಯಿತಿ ನೀಡಬಹುದು.

1) ಮಕ್ಕಳ ಚಿತ್ರ

2) ಬೋಧನ ಪ್ರದ ಚಿತ್ರ

3) ಚಿತ್ರದ ಪ್ರದರ್ಶನದಿಂದ ಬಂದ ಹಣವನ್ನು ಯಾವುದಾದರೂ ಧಾರ್ಮಿಕ, ದತ್ತಿ ಅಥವಾ ಸಾರ್ವಜನಿಕ ಕಾರ್ಯಗಳಿಗೆ ಉಪಯೋಗಿಸುವ ಸಂದರ್ಭಗಳಲ್ಲಿ.

4) ಮಾನ್ಯತೆ ಪಡೆದ ಚಲನಚಿತ್ರ ಸೊಸೈಟಿಯು ನಡೆಸುವ ಚಲನ ಚಿತ್ರ ಪ್ರದರ್ಶನಗಳಿಗೆ.

5) ಚಲನ ಚಿತ್ರ ಪ್ರದರ್ಶನಗಳು ಕೇವಲ ಮನರಂಜನೆ, ವೈಜ್ಞಾನಿಕ ಅಥವಾ ಬೋಧ ಪ್ರದವಾಗಿದ್ದು ಯಾವುದೇ ಲಾಭಕ್ಕೆ ಅಲ್ಲದಿದ್ದಾಗ.

ಈ) ಪ್ರಸ್ತುತ, ದೇಶದ ಯಾವುದೇ ಭಾಗದಲ್ಲಿ ತಯಾರಾದ ಎಲ್ಲಾ ಕನ್ನಡ ಚಿತ್ರಗಳಿಗೆ 50 ತೆರಿಗೆ ವಿನಾಯಿತಿ ನೀಡಲಾಗುತ್ತಿದೆ.

ಶ್ರೀ ಜ್ಞಾನ್ ದೇವ್ ದೊಡ್ಡಮೇಟಿ.— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಸಂಪೂರ್ಣವಾಗಿ ಹಣವನ್ನು ಬಿಡುಗಡೆ ಮಾಡಿದ್ದೇವೆಂದು ತಿಳಿಸಿದ್ದಾರೆ. ಆದರೆ ಚಲನಚಿತ್ರ ನಿರ್ಮಾಪಕರಿಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ ಎನ್ನುವುದನ್ನು ದಯವಿಟ್ಟು ತಿಳಿಸುತ್ತೀರಾ?

ಶ್ರೀ ಎಂ ರಘುಪತಿ.— ಸ್ವಾಮಿ, ನಾವು 1983-84ನೇ ಸಾಲಿನಲ್ಲಿ ಸುಮಾರು 45 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇನ್ನು ಮೂರನೆ ಎರಡರಷ್ಟು ಹಣ ಬಾಕಿ ಇದೆ. ಅಂದರೆ 26.25 ಲಕ್ಷ ರೂಪಾಯಿಗಳು, ಮತ್ತೆ ಇತ್ತೀಚೆಗೆ ನಾವು 14.80 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಇನ್ನು ಉಳಿದ ಬಾಕಿಯನ್ನು ಆದಷ್ಟು ಬೇಗ ಕೊಡುವ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಜ್ಞಾನ್ ದೇವ್ ದೊಡ್ಡಮೇಟಿ.— ಕರ್ನಾಟಕ ರಾಜ್ಯದಲ್ಲಿಯೇ ಕನ್ನಡ ಚಲನ ಚಿತ್ರಗಳನ್ನು ನಿರ್ಮಾಣ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಎಂ. ರಘುಪತಿ — ಈ ವಿಚಾರ ಸರ್ಕಾರದ ದೃಷ್ಟಿಯಲ್ಲಿದ್ದರೂ ಮಾಡುವುದು ಕಷ್ಟವಾಗುತ್ತದೆ. ನಮ್ಮಲ್ಲಿ ಎಲ್ಲಾ ಸೌಲಭ್ಯಗಳು ಇಲ್ಲ. ಫಿಲಂ ಪ್ರೊಸೆಸ್ ರೆಕಾರ್ಡಿಂಗ್ ನಮ್ಮಲ್ಲಿ ಇಲ್ಲದೆ ಇರುವುದರಿಂದ ಕಷ್ಟವಿದೆ. ಕರ್ನಾಟಕ ರಾಜ್ಯದಲ್ಲಿ ಕನ್ನಡ ಚಲನ ಚಿತ್ರಗಳನ್ನು ಪೂರ್ತಿ ಮಾಡಬೇಕಾದರೆ ಎಲ್ಲಾ ಸೌಲಭ್ಯಗಳನ್ನು ಒದಗಿಸಿ ಕೊಡಬೇಕಾಗುತ್ತದೆ.

ವಿಷಯ : ಸಾರ್ವಜನಿಕರ ಕುಂದು ಕೊರತೆಗಳ ನಿವಾರಣೆ

ಪ್ರಶ್ನೆ : 205(594) ಶ್ರೀ **ಬಿ. ಜಿ. ಬಣಕಾರ್** (ಹಿರೇಕೆರೂರು).— ಮಾನ್ಯ ಕಾನೂನು ಸಂಸದೀಯ ವ್ಯವಹಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ;—

ಅ) 1983 ಜನವರಿಯಿಂದ 31-12-1983ರ ವರೆಗೆ ಸಾರ್ವಜನಿಕರಿಂದ ಕುಂದು ಕೊರತೆಗಳ ನಿವಾರಣೆ ಕೋರಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು ;